**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

**ಸಿ.ಸಿ ನಂ. 1148/2011**

ದಿಃ **14-02-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಸಿಡಬ್ಲೂಃ 30** **ಪಿಡಬ್ಲೂಃ 26**

| | | |
|---|---|---|
| ಹೆಸರು | : | ಪಾರ್ವತಿ ಮಹಾದೇವಪ್ಪ ಗೋಠಡಕಿ |
| ತಂದೆ ಹೆಸರು | : | ಮಹಾದೇವಪ್ಪ ಗೋಠಡಕಿ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ಏನು ಇಲ್ಲ |
| ವಾಸಸ್ಥಳ | : | ಮಸಗುಪ್ಪಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1, 4 ರಿಂದ 19, 23, 24, 26, 28, 29, 31, 37, 38, ರವರ ಪರಿಚಯವಿರುತ್ತದೆ. ಚಾಸಾ-20, 21, 22, 25, 27, 32, 33, 34, 35, 36, 39 ರವರ ಪರಿಚಯವಿರುವುದಿಲ್ಲ. ಆರೋಪಿಯ ಪರಿಚಯವಿರುವುದಿಲ್ಲ.

ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸುಮಾರು 12 ವರ್ಷಗಳ ಹಿಂದೆ ನಾನು ಮ್ಯಾಕ್ಸ ಟೆಂಪೋದಲ್ಲಿ ಹೊಗುತ್ತಿರುವಾಗ ಅಪಘಾತವಾಗಿರುತ್ತದೆ. ನಾನು ಹಿಂದೆ ಕುಳಿತಿದ್ದೆ. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಪಡಿಸಿದ ವಾಹನವನ್ನು ಯಾರು ಚಲಾಯಿಸುತ್ತಿರುವರೆಂದು ನನಗೆ ಗೊತ್ತಿರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೋಲಿಸರು ಮುಂದೆ ಯಾವುದೇ ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ.

ಅಪಘಾತದಲ್ಲಿ ನನಗೆ ಗಾಯಗಳಾದ ಕಾರಣ ನಾನು ಆಸ್ಪತ್ರೆಗೆ ಹೋಗಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಲು ಮಾನ್ಯ ಸ.ಸ.ಅ. ಅವರು ಅನುಮತಿ ಕೋರಿದ್ದು, ಪರಿಶೀಲಿಸಿ ನೋಡಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸ.ಸ.ಅ. ಅವರಿಂದಃ</u>**

ದಿಃ 25-03-2011 ಮತ್ತು 27-03-2011 ರಂದು ನಾನು ಪೋಲಿಸರ ಮುಂದೆ ನೀಡಿದ ನನ್ನ ಹೇಳಿಕೆಗಳಲ್ಲಿ ಈಗ ಓದಿ ಹೇಳಿದ ನಿಪಿ-82 ಮತ್ತು 83 ರ ಅಂಶಗಳಂತೆ ನನ್ನ ಹೇಳಿಕೆಗಳನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ಮೇಲೆ ಹೇಳಿದಂತೆ ನಾನು ನನ್ನ ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಗಳನ್ನು ನಿಪಿ-82 ಮತ್ತು 83 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ</u>** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ

**(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)**
**ಹೆ.ದಿ.&ನ್ಯಾ.ದಂ.,ಗೋಕಾಕ.**